ಶ್ರೀ ವಿ. ಲಕ್ಷ್ಮೀಸಾಗರ್.—ಒಪ್ಪಿಪ್ಪುವಕ್ಕಾಗುವ್ವಿಲ್ಲ. ಲೆಕ್ಕದ ಪ್ರಕಾರ 1·82 ಸಾವಿರ ಮನೆಗಳನ್ನು ಕಟ್ಟುತಕ್ಕಂಥ ಯೋಜನೆಯನ್ನು ಘೋಷಣೆ ಮಾಡಿದರೀ ಪೊರತು. ಅದಕ್ಕೆ ತಗಲಿತಕ್ಕ ಹಣವನ್ನು ಖರ್ಚು ಮಾಡಲಿಕ್ಕೆ ಬಿಡುಗಡೆ ಮಾಡಲಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—1983–84ರ ಆಗಸ್ಟ್ ತಿಂಗಳ ಕೊನೆಯವರೆಗೆ 11·60 ಲಕ್ಷ ರೂಪಾಯಿಗಳ ಪೈಕಿ ಎಷ್ಟು ಹಣ ಖರ್ಚು ಮಾಡಿದ್ದೀರಿ ?

ಶ್ರೀ ವಿ. ಲಕ್ಷ್ಮೀಸಾಗರ್.—ಈ ವರ್ಷ ತೆಗೆದುಕೊಂಡಿರತಕ್ಕ ಮನೆಗಳಿಗೆ 386 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಎಷ್ಟು ಖರ್ಚು ಮಾಡಿದ್ದೀರಿ ?

ಶ್ರೀ ವಿ. ಲಕ್ಷ್ಮೀಸಾಗರ್:—ಜಿಲ್ಲಾಧಿಕಾರಿಗಳಿಂದ ವಿವರ ತರಿಸಿಕೊಂಡು ಹೇಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಒಂದಿನ ಸರ್ಕಾರದಲ್ಲಿ ಅಂದರೆ ಮೂರು ವರ್ಷದ ಅವಧಿಯಲ್ಲಿ ಸುಮಾರು 42 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 2·67 ಸಾವಿರ ಮನೆಗಳನ್ನು ಕಟ್ಟಲಾಗಿತ್ತು. ನಿಮ್ಮ ಸರ್ಕಾರ ಬಂದ ಮೇಲೆ 58.000 ಮನೆಗಳನ್ನು ಕಟ್ಟುವ್ವಕ್ಕಾಗಿ ಕೇವಲ 11ಕೋಟಿ ಮಾತ್ರ ಇಟ್ಟು ಕೊಂಡಿದ್ದೀರಿ : ಇದನ್ನು ಏತಕ್ಕೆ ಜಾಸ್ತಿ ಮಾಡುವಾರದು ?

ಶ್ರೀ ವಿ. ಲಕ್ಷ್ಮೀಸಾಗರ್.—ಬರೀ ಟೊಳ್ಳು ಘೋಷಣೆ ಮಾಡುವುದರ ಬದಲು ಮನೆ ಕಟ್ಟುವ್ವದಕ್ಕೆ ಹಣ ಬಿಡುಗಡೆ ಮಾಡುವ್ವದು ಮುಖ್ಯ.

(ಗೊಂದಲ)

ಉಪಾಧ್ಯಕ್ಷರು.—ಉದ್ವೇಗಕ್ಕೆ ಕಾರಣ ಇಲ್ಲ.

ಶ್ರೀ ಜೆ. ಡಿ. ಸೋಮಪ್ಪ.—ಟ್ರಜರಿ ಬೆಂಚ್ ಕಡೆಯವರೇ ಆಮ್ಲ ಕೂಗಾಡಿದರೆ, ನಾವು ಎಷ್ಟು ಕೂಗಾಡಬೇಕು.

ಶ್ರೀ ಧರ್ಮಸಿಂಗ್.—ಸ್ವಾಮಿ, 1983ನೇ ಇಸವಿಯಲ್ಲಿ ಜನತಾ ಮನೆಗಳನ್ನು ಕಟ್ಟಲಿಕ್ಕೆ ದುಡ್ಡು ಖರ್ಚು ಮಾಡಿಲ್ಲವೆಂದು ಮಾನ್ಯಮಂತ್ರಿಗಳು ಹೇಳ್ದಾರೆ : ಇದು ಸತ್ಯಕ್ಕೆ ದೂರವಾದ ಮಾತು. ಇದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆಯಾಗಲಿ. ಬಡವರಿಗೆ ಹರಿಜನ ಗಿರಿಜನರಿಗೆ ಅನುಕೂಲವಾಗುವ ಈ ಯೋಜನೆಯನ್ನು ಕಾರ್ಯಗತ ಮಾಡುವುದರಲ್ಲಿ ಅಧಿಕಾರಿಗಳ ಮನಸ್ಸನ್ನು ಬದಲಾಯಿಸಬೇಕು. ನಮ್ಮ ಕಾಲದಲ್ಲಿ 1·2 ಸಾವಿರ ಮನೆಗಳನ್ನು ಐಡೆಂಟಿಫೈ ಮಾಡುವುದಕ್ಕೆ ಡೈರೆಕ್ಷನ್ ಕೊಟ್ಟಿದ್ದೇವೆ. ದುಡ್ಡು ಕೂಡ ಕೊಟ್ಟಿದ್ದೇವೆ.

ವಿಷಯ : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಪ್ರತಿಯೊಂದು ಡಿಪೋಗೆ ದುಂಡಿಕೆ ಮಾಡಿದ ಬಸ್ಸುಗಳು.

ಪ್ರ. 225 (33) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದ್‌ಗುಡ್ಡ).—ಮಾನ್ಯ ಸಾರಿಗೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕಳೆದ ಜುಲೈ ತಿಂಗಳ ಅಂತ್ಯದವರೆಗೆ ರಾಜ್ಯ ಸಾರಿಗೆ ಸಂಸ್ಥೆಯಿಂದ ಯಾವ ಯಾವ ಡಿಪೋಗಳಿಗೆ ಒಟ್ಟು ಎಷ್ಟು ಬಸ್ಸುಗಳನ್ನು ಹಂಚಲಾಗಿದೆ :

(ಆ) ವಿಜಾಪುರ ಜಿಲ್ಲೆಯಲ್ಲಿ ಒಟ್ಟು ಎಷ್ಟು ಡಿಪೋಗಳು ಇವೆ :

(ಇ) ಹೊಸ ಮಾರ್ಗಗಳನ್ನು ಸರ್ವೆ ಮಾಡಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ :

(ಈ) ಹಾಗಿದ್ದಲ್ಲಿ ವಿವರಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಸಚಿವರು).—

(ಅ) ವಾಹನಗಳನ್ನು ಡಿಪೋಗಳ ಮೇಲೆ ಹಂಚುವುದಕ್ಕೆ ಬರುವ್ವುಲ್ಲ. ಆದರೆ ವಾಹನಗಳನ್ನು ವಿಭಾಗಗಳ ಮೇಲೆ ಹಂಚಲಾಗುತ್ತೆ. ಸಾರಿಗೆ ಸಂಸ್ಥೆಯಿಂದ 1983 ಜುಲೈ ತಿಂಗಳ ಅಂತ್ಯದವರೆಗೆ ವಿಭಾಗಗಳಿಗೆ ಹಂಚಿಲಾದ ವಾಹನಗಳ ವಿವರಗಳು ಈ ಕೆಳಗೆ ಕಂಡಂತಿವೆ :—

1.	ಹುಬ್ಳಿ	15
2.	ಬೆಳಗಾಂ	16
3.	ವಿಜಾಪುರ	21
4.	ಗುಲ್ಬರ್ಗಾ	7
5.	ಸಿರ್ಸಿ	10
6.	ಬಳ್ಳಾರಿ	12
7.	ಮೈಸೂರು	20
8.	ಬೆಂಗಳೂರು	59
9.	ಕೋಲಾರ	18
10.	ರಾಯಚೂರು	14
11.	ಮಂಗಳೂರು	15

12. ಹಾಸನ 18
13. ಬಿ.ಟಿ.ಎಸ್. 26

(ಆ) ಬಿಜಾಪುರ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 6 ಡಿಪೋಗಳು ಇವೆ.

(ಇ) ಬಂದಿವೆ.

(ಈ) 55 ಮಾರ್ಗಗಳ ಸರ್ವೆಯನ್ನು ಮಾಡಲಾಗಿದೆ. ಈ 55 ಮಾರ್ಗಗಳ ವಿವರಗಳನ್ನು "ಅ" ಪಟ್ಟಿಯಲ್ಲಿ ಲಗತ್ತಿಸಿದೆ. ಪಟ್ಟಿಯಲ್ಲಿರುವ ಕ್ರಮಸಂಖ್ಯೆ 1 ರಿಂದ 36 ಮಾರ್ಗಗಳಲ್ಲಿ ಅಧಿಕ ಪ್ರಮಾಣದ ಸೌಕರ್ಯಗಳನ್ನು ಆಗಸ್ಟ್ 820ರಂದು ಒದಗಿಸಲಾಗಿದೆ. ಉಳಿದ ನಾಲ್ಕು ರಸ್ತೆಗಳಲ್ಲಿ ಅಂದರೆ ಕ್ರಮಸಂಖ್ಯೆ 37–40 ರವರೆಗೆ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆ ಸಾರಿಗೆ ಸೌಲಭ್ಯವನ್ನು ಹಂತ ಹಂತವಾಗಿ ಕಲ್ಪಿಸಲು ಯೋಚಿಸಿದೆ. ಇನ್ನುಳಿದ 15 ಮಾರ್ಗಗಳಿಗೆ ಅಂದರೆ ಕ್ರಮಸಂಖ್ಯೆ 41–55 ರವರೆಗೆ ಪ್ರಾಪ್ತ ಸಂಚಾರವನ್ನು ಕೊಡುವುದಕ್ಕೆ ಆಗುವುದಿಲ್ಲ. ಕಾರಣ ಈ ಮಾರ್ಗಗಳಲ್ಲಿನ ರಸ್ತೆಗಳು ಪ್ರಾಪ್ತ ಸಂಚಾರಕ್ಕೆ ಯೋಗ್ಯವಾಗಿಲ್ಲ ವಿರುವುದರಿಂದ.

ಅನುಬಂಧ 'ಅ'

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 33 (ಡಿ)—ಶ್ರೀ ಮಲ್ಲಿಕಾರ್ಜುನ ವಿ. ಬಸ್ಸಿ.

ಆಗಸ್ಟ್ 1982 ರಿಂದ ಪ್ರಾಪ್ತ ಸಂಚಾರವನ್ನು ಒದಗಿಸಿರುವ ವಿವರಗಳು ಈ ಕೆಳಕಂಡಂತೆ ಇವೆ.

1. ಸಿಂದಗಿಯಿಂದ ಕುಮಸಗಿ ಮಲಘಾನ್–ಆಲಮೇಲ್ ಕ್ರಾಸ್ ಮಾರ್ಗವಾಗಿ.
2. ಎನ್.ಹೆಚ್. ಬ್ರಿಡ್ಜ್‌ನಿಂದ ಮುಸಗುಂದ–ಹೊಸೂರ್ ಕ್ರಾಸ್. ಬೆಲ್‌ಕಿನಕೊಪ್ಪ–ದೇವಲಾಪುರ ಕ್ರಾಸ್ ಮಾರ್ಗವಾಗಿ.
3. ಮುದೋಳದಿಂದ ಆಕ್ಕಿವರವಿ ಮದಲಿಂಗಪುರ. ನಂದಗೂನ್ ಕ್ರಾಸ್ ಮಾರ್ಗವಾಗಿ.
4. ಮುದೋಳದಿಂದ ಗಲಗ ಬಿಚ್ಚಿಕೊಂಡಿ—ಲಕ್ಕೀನಹಾಳ್.
5. ಮುದೋಳದಿಂದ ಹಲಕಿ ನಿಂಗಾಪುರ ಮಾರ್ಗವಾಗಿ.
6. ಇಂಡಿಯಿಂದ ಚಿಗವಾಣಿ ಮಾರ್ಗವನ್ನು ಲಮಾಣಿಹಳ್ಳಿಯವರೆಗೆ ವಿಸ್ತರಿಸಲಾಗಿದೆ.
7. ಬಿಜಾಪುರದಿಂದ ಮುದಾಬಾವಿ ಬುರಣಪುರ ಮಾರ್ಗವಾಗಿ.
8. ಜಮಖಂಡಿಯಿಂದ ಬಿಜಾಪುರ ನಾಗನೂರ ಕ್ರಾಸ್ ಮಾರ್ಗವಾಗಿ.
9. ಬಿಜಾಪುರದಿಂದ ಗುಲಗೇರಿ ಪ್ರಾಪ್ತವನ್ನು ಸಾಲವಡಗಿ, ಬಿ. ಮದು–ಹೊನ್ನಳ್ಳಿ ಮುಖಾಂತರ ವಿಸ್ತರಿಸಲಾಗಿದೆ.
10. ಬಾದಾಮಿ ಇಂದ ಆನ್‌ವಾಲ್ ಫಕೀರ್ ಬೂದಿಹಾಳ ಮಾರ್ಗವಾಗಿ.
11. ಜಮಖಂಡಿಯಿಂದ ಕವಟಿಗೆ.
12. ಆಥಣಿಯಿಂದ ಕಡಗನೂರು ಪ್ರಾಪ್ತಸಂಚಾರವನ್ನು ಘಟನಾಹಾಳ ಮುಖಾಂತರ ಓಡಿಸ ಲಾಗುತ್ತಿದೆ.
13. ಸಿಂಧಿ ಇಂದ ಜೂರಗಿ ಆನ್ಸ ಮಾರ್ಗವಾಗಿ.
14. ಬಿಜಾಪುರದಿಂದ ನಾಗತ್ತನ್ ಆಲಿಯಬಾದ್ ಮೂಜಿರಿ ಮಾರ್ಗವಾಗಿ.
15. ಆಥಣಿಯಿಂದ ಜಕರಟ್ಟಿ ರಾತ್ರಿ ತಂಗುವ ಪ್ರಾಪ್ತವನ್ನು ವಿಜಯವಾಡಿಯವರೆಗೆ ವಿಸ್ತರಿಸಲಾಗಿದೆ.
16. ಮುಸಗುಂದದಿಂದ ಚಿಂತಕಮಲ ದಿಣ್ಣೆ ರಾಮಾಪಾಡಗಿ. ಬೇಗಂ ದಿಣ್ಣೆ ಮಾರ್ಗವಾಗಿ.
17. (ಎ) ಬಾಗಲಕೋಟೆಯಿಂದ ನೀರಲ್‌ಕೆರೆ ಪ್ರಾಪ್ತವನ್ನು ಕಾಕನೂರುವರೆಗೆ ವಿಸ್ತರಿಸಲಾಗಿದೆ. (ಜಿ) ಬಾಗಲಕೋಟೆಯಿಂದ ರಾಮದುರ್ಗ ಪ್ರಾಪ್ತವನ್ನು ಕಾಕನೂರು–ನೀರಲ್‌ಕೆರೆ ಮುಖಾಂತರ ಓಡಿಸಲಾಗುತ್ತಿದೆ.
18. ಇಂಡಿಯಿಂದ ಮರಗೊರು ಧುಲ್‌ಕೊಡಿ ಮಾರ್ಗವಾಗಿ.
19. ಬಾಗಲವಾಡಿಯಿಂದ ಇಂಗಳೇಶ್ವರ ಪ್ರಾಪ್ತವನ್ನು ರಾಂಪಿನಾಹಾಳ್‌ವರೆಗೆ ವಿಸ್ತರಿಸಲಾಗಿದೆ.
20. ತಾಳಿಕೋಟೆಯಿಂದ ಮುದ್ದೇಬಿಹಾಳ್ ಪ್ರಾಪ್ತವನ್ನು ಪ್ರಾಪ್ತರು ಮಾರ್ಗವಾಗಿ ವಿಸ್ತರಿಸಲಾಗಿದೆ.
21. ಬಾಗೇಪಾಡಿಯಿಂದ ಆಂಬಲನೂರ್ ನರಸಿಂಗೀ ಮಾರ್ಗವಾಗಿ.
22. ಇಲ್‌ಕಲ್ ಇಂದ ಬೂದಿಹಾಳ್ ತುಂಬೆ ಕ್ರಾಸ್ ಮಾರ್ಗವಾಗಿ.
23. ಮುಸಗುಂದದಿಂದ ಪಿರೇಮಾಲಗವಿ ಬೆಳ್‌ಗೊಳ್ ಮಾರ್ಗವಾಗಿ.
24. ಬಾಗಲಕೋಟೆಯಿಂದ ಕುಲಹಳ್ಳಿ ದೇವನಹಾಳ್ ಮಾರ್ಗವಾಗಿ.
25. ಮದಾಹಾಲ್‌ನಿಂದ ಬೂದನಿ.
26. ಬಿಜಾಪುರದಿಂದ ಜಮಖಂಡಿ ಜೋಡಿಕ್ಕಲಕಿ ಮಾರ್ಗವಾಗಿ.
27. ಪಡಗಲಿಗಿಯಿಂದ ದೊಣಸೂರ್–ನಾಗಿನಾಳ್ ಕ್ರಾಸ್ ಮಾರ್ಗವಾಗಿ.
28. ಮುದ್ದೇಬಿಹಾಳ್‌ದಿಂದ ಮುನಕುಂಟಿ ಪ್ರಾಪ್ತವನ್ನು ಸರಯಾಲ್ ಮುಖಾಂತರ ಓಡಿಸಲಾಗುತ್ತಿದೆ.
29. ಮುದ್ದೇಬಿಹಾಳ್‌ದಿಂದ ಚಿರಬಿಕ್ಕೊಳ್ ಮುದಿನಾಳ್‌ಹಳ್ಳಿ ಮಾರ್ಗವಾಗಿ.

30. ಹಡಗಿನಾಳ್ ಕ್ರಾಸ್‌ನಿಂದ ಹಡಗಿನಾಳ್‌ವರೆಗೆ ವಿಸ್ತರಿಸಲಾಗಿದೆ.
31. ಬಿಜಾಪುರದಿಂದ ಉಕ್ಕಾಳಿ ರಾತ್ರಿ ತಂಗುವ ವಾಹನ ಸಂಚಾರವನ್ನು ಮಸಬಿನಾಳವರೆಗೆ ವಿಸ್ತರಿಸಲಾಗಿದೆ.
32. ಬಿಜಾಪುರದಿಂದ ನಿಡಗುಂದಿ ರಾತ್ರಿ ತಂಗುವ ವಾಹನವನ್ನು ವಡವಾಗೀವರೆಗೆ ವಿಸ್ತರಿಸಲಾಗಿದೆ.
33. ಅಥಣಿಯಿಂದ ಇನ್‌ಗಲ್ಲ್‌ಗ್ರಾಮ ವಾಹನವನ್ನು ಧೀರತ್‌ವರೆಗೆ ವಿಸ್ತರಿಸಲಾಗಿದೆ.
34. ಅಥಣಿಯಿಂದ ಪಂಡೀಗನ್ ತೀವರತ್ತಿ ಮಾರ್ಗವಾಗಿ.
35. ಬಾದಾಮಿಯಿಂದ ಇಲ್‌ಕಲ್ 2 ವಾಹನ ಸಂಚಾರವನ್ನು ನಂದಿಕೇಶ್ವರ ಮಹಾಕೋಟಿಯ ವರೆಗೆ ವಿಸ್ತರಿಸಲಾಗಿದೆ.
36. ಜಮಖಂಡಿಯಿಂದ ಹುಣಸಿಕಟ್ಟಿ.
37. ಅಥಣಿಯಿಂದ ತನಗೋಡಿಯವರೆಗೆ.
38. ಬಳಗನೂರ್ ಕ್ರಾಸ್‌ನಿಂದ ಬಳಗನೂರ್ ಹಳ್ಳಿಗೆ.
39. ಕುಮಾರಹಳ್ಳಿಯಿಂದ ಜಕನೂರ್‌ವರೆಗೆ.
40. ಸಾವಲ್‌ಗಿಯಿಂದ ಕಜೆಬಿಳಗಿಯವರೆಗೆ.
41. ಅಗಸನಾಳ್‌ನಿಂದ ಕ್ಯಾತನಕೆರೆ.
42. ಕಾವಟಗಿ ಕ್ರಾಸ್‌ನಿಂದ ಬಿದರಿಗೆ.
43. ರೂಡ್‌ಗಿಯಿಂದ ಅರೆಶಂಕರ್‌ವರೆಗೆ.
44. ಕಮಟಗಿಯಿಂದ ಚೌಡಾಪುರದವರೆಗೆ.
45. ಕಮಟಗಿಯಿಂದ ಬೆನಕಟ್ಟಿವರೆಗೆ.
46. ಜಂಬಗಿಯಿಂದ ಅಥಣಿಗೆ.
47. ಅಥಣಿಯಿಂದ ಮಡಭಾವಿ ಮಾರ್ಗವಾಗಿ ಮೊಸರಗುಪ್ಪಿಗೆ.
48. ಸರವಾರ್ದ್‌ನಿಂದ ಸಂಗಾಪುರ್‌ಗೆ.
49. ಸರ್‌ವಾರ್ದ್‌ನಿಂದ ದೊಡ್ಡಮತಿ.
50. ಸಲದಹಳ್ಳಿಯಿಂದ ಚಟ್ಟನಹಳ್ಳಿ.
51. ಸುರಪಲ್ಲಿನಿಂದ ಕಾಕಟ್‌ನೂರ್‌ಗೆ.
52. ಮುದ್ದೇಬಿಹಾಳ್‌ಯಿಂದ ಚವನಭಾವಿಯವರೆಗೆ.
53. ಅಡವಿಸೋಮನಹಳ್ಳಿಯಿಂದ ತಾಳಿಕೋಟೆಗೆ.
54. ತಾಳಿಕೋಟೆಯಿಂದ ಕೋಡೆಕಲ್ ಮಾರ್ಗವಾಗಿ ಹರಟಗಿಗೆ.
55. ಆಹೆರಿಯಿಂದ ಅನಕಲ್‌ಗಿಗೆ.

ಶ್ರೀ ಮಲ್ಲಿಕಾರ್ಜುನ ಖೂಬಾ.—ವಿಜಾಪುರ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಡಿಪೋಗಳಿವೆ ಎಂದು ಹೇಳಿದ್ದೀರಿ. ಹೊಸದಾಗಿ ತೆರೆಯುವ ವಿಚಾರ ಸರ್ಕಾರಕ್ಕೆ ಇಲ್ಲವೇ; ಇದ್ದರೆ, ಯಾವ ಆಧಾರದ ಮೇಲೆ ತೆರೆಯುತ್ತೀರಿ?

ಶ್ರೀ ಎಂ. ಪಿ. ಪ್ರಕಾಶ್.—ಸಾಧಾರಣವಾಗಿ ಅಲ್ಲಿರತಕ್ಕ ವಾಹನಗಳ ಓಡಾಟದ ಲೆಕ್ಕದಂತೆ ಡಿಪೋ ತೆರೆಯತಕ್ಕ ಯೋಜನೆ ಇದೆ. ಈಗಾಗಲೇ ಅಲ್ಲಿ ಸಾಕಷ್ಟು ಡಿಪೋಗಳು ಇರುವುದರಿಂದ ಈಗ ಹೊಸದಾಗಿ ತೆರೆಯತಕ್ಕ ಯೋಜನೆ ಇಲ್ಲ.

ಶ್ರೀ ಎಂ. ಮಹದೇವ್.—ಅಧ್ಯಕ್ಷರೇ, ಸಾರಿಗೆ ಸಚಿವರು ವೇಗವಾಗಿ ಇದ್ದಾರೆ; ಪತ್ರ ವ್ಯವಹಾರ ವೇಗವಾಗಿ ನಡೆಯುತ್ತದೆ: ಆದರೆ ಸಾರಿಗೆ ವ್ಯವಸ್ಥೆ ಮಾತ್ರ ವೇಗವಾಗಿ ಆಗುತ್ತಿಲ್ಲ. ಅಂಚೇಪುರ ಗ್ರಾಮಕ್ಕೆ ಒಂದು ಬಸ್ಸು ಕೊಡಬೇಕೆಂದು ಕೇಳುತ್ತಿದ್ದೇನೆ. ಅಲ್ಲಿ ಪಿ.ಡಬ್ಲ್ಯು.ಡಿ. ರಸ್ತೆ ಇದೆ, ಆದ್ದರಿಂದ ಅಂಚೇಪುರ ಗ್ರಾಮಕ್ಕೆ ಒಂದು ಬಸ್ಸು ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೇ, ಇದು ಈಗ ಮುಖ್ಯ ಪ್ರಶ್ನೆಯು ವ್ಯಾಪ್ತಿಯಲ್ಲಿ ಬರುವುದಿಲ್ಲ. ಆನಂತರ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖೂಬಾ.—"ಬಾದಾಮಿಯಿಂದ ಇಲ್‌ಕಲ್ 2 ವಾಹನ ಸಂಚಾರವನ್ನು ನಂದಿಕೇಶ್ವರ, ಮಹಾಕೋಟಿಯವರೆಗೆ ವಿಸ್ತರಿಸಲಾಗಿದೆ" ಎಂದು ಹೇಳಿದ್ದೀರಿ. ಅಲ್ಲಿಗೆ ಪಟ್ಟಿನ ಬಸ್ಸಿನ ಸೌಕರ್ಯ ಒದಗಿಸುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಈಗ ತಾವು ಹೇಳತಕ್ಕದ್ದು ಮುಖ್ಯ ಪ್ರಶ್ನೆಯಲ್ಲ. 55 ಮಾರ್ಗಗಳನ್ನು ಸರ್ವೆ ಮಾಡಿಸಿ 36 ಮಾರ್ಗಗಳಲ್ಲಿ ಅಧಿಕ ವಾಹನ ಸೌಕರ್ಯಗಳನ್ನು ಒದಗಿಸಲಾಗಿದೆ. ಇನ್ನು ಉತ್ತರದಲ್ಲಿ ಲಗತ್ತಿಸಿರತಕ್ಕ ಪಟ್ಟಿಯ ಕ್ರಮಾಂಕ 37 ರಿಂದ 40 ರವರೆಗೆ ಸಾರಿಗೆ ಸೌಲಭ್ಯವನ್ನು ಹಂತ ಹಂತವಾಗಿ ಕಲ್ಪಿಸಲಾಗುತ್ತದೆ. ಇನ್ನು ಉಳಿದ ಕಡೆಗಳಲ್ಲಿ ರಸ್ತೆ ಸರಿಯಿಲ್ಲ. ರಸ್ತೆ ಸರಿಯಾದ ತಕ್ಷಣ ಬಸ್ಸುಗಳನ್ನು ಬಿಡುವ ವ್ಯವಸ್ಥೆ ಮಾಡುತ್ತೇವೆ.